## ಕರ್ನಾಟಕ ಪಬ್ಲಿಕ್ ಸ್ಕೂಲ್ ಹಿರಿಯಡ್ಕ




ಹಿರಿಯಡ್ಕ: ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಪ್ರಗತಿ ಸಾಧಿಸಬಹುದು - ಎನ್. ಸಿ.ಸಿ ಕಮಾಂಡರ್ ಶ್ರೀ ಅಶ್ವಿನಿ ಎಂ ರಾವ್

ದಿನಾಂಕ 27-06- 2025 ರಂದು ಅವರು ಕರ್ನಾಟಕ ಪಬ್ಲಿಕ್ ಸ್ಕೂಲ್ ಹಿರಿಯಡ್ಕ ಇಲ್ಲಿಯ ಪ್ರೌಢಶಾಲಾ ವಿಭಾಗದ ನೂತನ ಎನ್‌ಸಿಸಿ ನೇವಲ್ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.ಸಂಘಟನೆ ಮತ್ತು ಶಿಸ್ತು ಎನ್.ಸಿ.ಸಿಯ ಮುಖ್ಯ ಧ್ಯೇಯ.ಎನ್‌ಸಿಸಿ ಸೇರುವುದರಿಂದ ವಿದ್ಯಾರ್ಥಿಗಳು ಸಾಮಾಜಿಕವಾಗಿ ರಾಷ್ಟ್ರೀಯವಾದಿಯಾಗಿ ದೇಶದ ಉತ್ತಮ ನಾಗರಿಕರಾಗಲು ಸಾಧ್ಯ.




ಕೃಷಿ ಅರ್ಥಶಾಸ್ತ್ರಜ್ಞರಾದ ಡಾಕ್ಟರ್ ಎನ್ ಎಸ್ ಶೆಟ್ಟಿ ಮಾತನಾಡಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಹಿರಿಯಡ್ಕ ಇಲ್ಲಿ ನೂತನವಾಗಿ ಎನ್ ಸಿ ಸಿ ಘಟಕ ಆರಂಭವಾಗಿರುವುದು ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶಿಸ್ತು ದೇಶಾಭಿಮಾನ ಮೂಡಿಸಲು ಅನುಕೂಲವಾಗಿರುತ್ತದೆ ಎಂದು ಹೇಳಿದರು. ಎನ್. ಸಿ.ಸಿ ಕಮಾಂಡರ್ ಶ್ರೀ ಅಶ್ವಿನಿ ಎಂ ರಾವ್ ಎನ್ ಸಿ.ಸಿ ಧ್ವಜವನ್ನು ಸಂಸ್ಥೆಗೆ ಹಸ್ತಾಂತರಿಸಿದರು. ನೇವಲ್

ಕಮಾಂಡರ್ ಎಂ ಎ ಮುಲ್ತಾನಿ ಮತ್ತು ತರಬೇತುದಾರರಾದ ಕಮಾಂಡರ್ ಶ್ರೀ ಅನಿಲ್ ದಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಮಂಜುನಾಥ ಭಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು . ಸಭೆಯಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಬಿ ಎಲ್ ವಿಶ್ವಾಸ್, ಅಶೋಕ್ ಜೋಗಿ,ಶ್ರೀ ಮುರಳೀಧರ ಹಾಲಂಬಿ,ಶ್ರೀಮತಿ ಜ್ಯೋತಿ ಪ್ರಭು,ಶ್ರೀಮತಿ ಲಕ್ಷ್ಮಿ ಶೆಟ್ಟಿ,ಶ್ರೀಮತಿ ನಿಷಿತಾ ಶೆಟ್ಟಿ,ಶ್ರೀ ನಿತ್ಯಾನಂದ ನಾಯಕ್,ಶ್ರೀ ದೇವರಾಜ್ ಶಾಸ್ತ್ರಿ,ಶ್ರೀ ಸುಬ್ರಹ್ಮಣ್ಯ ರಾವ್ ಉಪಸ್ಥಿತರಿದ್ದರು. ಪ್ರೌಢಶಾಲಾ ವಿಭಾಗದ ಹಿರಿಯ ಅಧ್ಯಾಪಕರಾದ ಶ್ರೀ ವಿಜಯಕುಮಾರ್ ಸ್ವಾಗತಿಸಿದರು. ಎನ್ ಸಿ.ಸಿ ಘಟಕದ ಕೋ ಆರ್ಡಿನೇಟರ್ ಮಹೇಶ್ ಕೊಠಾರಿ ವಂದಿಸಿದರು. ಅಧ್ಯಾಪಕರಾದ ಡಾ. ರವೀಂದ್ರ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಕಮಾಂಡರ್ ಅಶ್ವಿನ್ ರಾವ್ ರವರು ಹಣ್ಣಿನ ಗಿಡವನ್ನು ನೆಡುವುದರ ಮೂಲಕ ನೂತನ ಎನ್ ಸಿ. ಸಿ ಘಟಕಕ್ಕೆ ಚಾಲನೆ ನೀಡಿದರು.




6(KAR) NAVAL UNIT NCC, UDUPI
रा कै को
NCC
SUB UNIT NO.71JD TROOP (NAVY)
KARNATAKA PUBLIC SCHOOL, HIRIADKA
RAISING DAY
DATE: 27-06-2025
PLACE: KPS, HIRIADKA